ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 1522 (1734)
ಸದಸ್ಯರ ಹೆಸರು	: ಶ್ರೀ ಡಾ: ಚಂದ್ರಶೇಖರ್ ಬಿ. ಪಾಟೀಲ್ (ಪದವೀಧರರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	: 22-03-2021
ಉತ್ತರಿಸುವ ಸಚಿವರು	: ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ.	ರಾಜ್ಯದ ಒಂದು ವಿಭಾಗದಲ್ಲಿ ಕೆಲಸ ಮಾಡುತ್ತಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆ ಶಿಕ್ಷಕರು ಮತ್ತೊಂದು ವಿಭಾಗಕ್ಕೆ ವರ್ಗಾವಣೆಗೊಂಡಾಗ ಅವರು ಸಲ್ಲಿಸಿರುವ ವಿಭಾಗದ ಸೇವೆಯನ್ನು ಪರಿಗಣಿಸಿ ಮುಂಬಡ್ತಿ ನೀಡಲು ನಿಯಮಗಳಲ್ಲಿ ಅವಕಾಶವಿದೆಯೇ; ಇಲ್ಲದಿದ್ದಲ್ಲಿ, ಪರಿಗಣಿಗಲು ಕೈಗೊಳ್ಳುವ ಅಥವಾ ಕೈಗೊಂಡಿರುವ ಕ್ರಮಗಳು ಏನು?	**ಪ್ರಾಥಮಿಕ:** ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ unit of seniority ಜಿಲ್ಲಾ ಘಟಕವಾಗಿರುತ್ತದೆ. ಒಂದು ಜೇಷ್ಠತಾ ಘಟಕದಿಂದ ಮತ್ತೊಂದು ಜೇಷ್ಠತಾ ಘಟಕಕ್ಕೆ ಕೋರಿಕೆ ಮೇರೆಗೆ ವರ್ಗಾವಣೆ ಹೊಂದಿದ್ದಲ್ಲಿ, ಅವರ ಹಿಂದಿನ ಜೇಷ್ಠತಾ ಘಟಕ ಸೇವೆಯನ್ನು ಪರಿಗಣಿಸಿ ಮುಂಬಡ್ತಿ ಪರಿಗಣಿಸಲು ಅವಕಾಶವಿರುವುದಿಲ್ಲ. ವರ್ಗಾವಣೆಯಾದ ಘಟಕದಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಜೇಷ್ಠತೆ ಪರಿಗಣಿಸಲಾಗುತ್ತದೆ. **ಪ್ರೌಢ:** ಸರ್ಕಾರಿ ಪ್ರೌಢಶಾಲಾ ಶಿಕ್ಷಕರ ವೃಂದಕ್ಕೆ ಸಂಬಂಧಪಟ್ಟಂತೆ "ಜೇಷ್ಠತಾ ಘಟಕ ಎಂದರೆ ಆಯಾ ವಿಭಾಗ" ಎಂಬುದಾಗಿ ಪರಿಗಣಿಸತಕ್ಕದ್ದು. ಒಂದು ಜೇಷ್ಠತಾ ವಿಭಾಗದಿಂದ ಮತ್ತೊಂದು ಜೇಷ್ಠತಾ ವಿಭಾಗಕ್ಕೆ ಕೋರಿಕೆ ಮೇರೆಗೆ ವರ್ಗಾವಣೆ ಹೊಂದಿದಲ್ಲಿ ಅವರ ಹಿಂದಿನ ಜೇಷ್ಠತಾ ವಿಭಾಗದ ಸೇವೆಯನ್ನು ಮುಂಬಡ್ತಿಗೆ ಪರಿಗಣಿಸಲು ಅವಕಾಶವಿರುವುದಿಲ್ಲ. ವರ್ಗಾವಣೆಯಾದ ವಿಭಾಗದಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಜೇಷ್ಠತೆ ಪರಿಗಣಿಸಲಾಗುತ್ತದೆ.

ಸಂಖ್ಯೆ: ಇಪಿ 19 ಪಿಎಂಎ 2021

(ಎಸ್. ಸುರೇಶ್‌ಕುಮಾರ್)
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ
ಹಾಗೂ ಸಕಾಲ ಸಚಿವರು